ಸೃಜನಿ

SRUJANI: Indian Journal of Innovative Research and Development (SIJIRD)
Volume-5 Issue 3, July-August 2026, Pp. 128-131
Bi-Monthly, Peer-Reviewed, Open Access, Indexed Journal

I S S N: 2583-3510
SIRDF
JOURNALS
editor@srujani.in
www.srujani.in

# ಪುಣ್ಯಕೋಟಿ ಕೇವಲ ಕಥೆಯಲ್ಲ ಬದುಕಿನ ಸಂಸ್ಕಾರ

**ಕಲ್ಪನ ಪಿ**
ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು
ಚಿಕ್ಕನಾಯಕನಹಳ್ಳಿ, ತುಮಕೂರು ಜಿಲ್ಲೆ

***Abstract:***

*ಕನ್ನಡದ ಜನಪ್ರಿಯ ಕಥನ ಗೀತೆ ಯಾದ ಗೋವಿನ ಹಾಡು ಹಸು ಮತ್ತು ಹುಲಿಯ ಕಥೆಯಾಗಿರದೆ ಮಾನವೀಯ ಮೌಲ್ಯಗಳು ಮತ್ತು ಸದಾಚಾರವನ್ನು ಬೋಧಿಸುವ ಜೀವಂತ ಸಂಸ್ಕಾರವಾಗಿದೆ. ಹಸಿದ ಹುಲಿಗೆ ಸಿಲುಕಿದ ಪುಣ್ಯಕೋಟಿಯು ತನ್ನ ಕರುವಿಗೆ ಹಾಲುಣಿಸಿ ಬರುವುದಾಗಿ ಮಾತುಕೊಟ್ಟು ಸಾವಿನ ದವಡೆಯಲ್ಲೂ ವಚನ ಪಾಲನೆ ಮತ್ತು ಕರ್ತವ್ಯ ಪ್ರಜ್ಞೆಯನ್ನು ಮೆರೆಯುತ್ತದೆ. ಪ್ರಾಣಕ್ಕಿಂತಲೂ ಸತ್ಯವೇ ಮಿಗಿಲು ಎಂಬ ಪುಣ್ಯಕೋಟಿಯ ಸತ್ಯ ನಿಷ್ಠೆ, ಮಾತೃ ವಾತ್ಸಲ್ಯ ಮತ್ತು ತ್ಯಾಗದ ಮನೋಭಾವ ಕೊನೆಗೆ ಕ್ರೂರ ಹುಲಿಯ ಮನಸ್ಸನ್ನು ಪರಿವರ್ತಿಸಿ ಪಶ್ಚಾತ್ತಾಪ ಪಡುವಂತೆ ಮಾಡುತ್ತದೆ. ಪ್ರಸ್ತುತ ಲೇಖನವು ಪುಣ್ಯಕೋಟಿಯ ಪಾತ್ರದ ಮೂಲಕ ಸತ್ಯ, ಪ್ರಾಮಾಣಿಕತೆ, ವಚನಬದ್ಧತೆ, ಕರುಣೆ ಮತ್ತು ಧರ್ಮದ ಮಹತ್ವವನ್ನು ಪರಿಶೀಲಿಸುತ್ತದೆ. ನೈತಿಕತೆ ಕುಸಿಯುತ್ತಿರುವ ಇಂದಿನ ಸಮಾಜದಲ್ಲಿ ವ್ಯಕ್ತಿತ್ವ ನಿರ್ಮಾಣಕ್ಕೆ ಮತ್ತು ಮೌಲ್ಯಧಾರಿತ ಬದುಕಿಗೆ ಈ ಕಥೆಯು ಮಾರ್ಗದರ್ಶಿಯಾಗಿದೆ.*

***Keywords:*** *ಗೋವಿನ ಹಾಡು ಪುಣ್ಯಕೋಟಿ, ಅರ್ಬುತ, ಸತ್ಯನಿಷ್ಠೆ, ಮಾನವೀಯ ಮೌಲ್ಯ, ಸಂಸ್ಕಾರ, ವಚನ ಪರಿಪಾಲನೆ.*

## ಪೀಠಿಕೆ

ಗೋವಿನ ಹಾಡು ಕನ್ನಡದ ಪ್ರಸಿದ್ಧ ಜಾನಪದ ಗೀತೆಗಳಲ್ಲಿ ಒಂದು. ಇದು ಗೋವು ಮತ್ತು ಮನುಷ್ಯನ ನಡುವಿನ ಆತ್ಮಿಯ ಸಂಬಂಧ. ಗೋವಿನ ಕರುಣೆ, ನಿಷ್ಠೆ ಹಾಗೂ ತ್ಯಾಗವನ್ನು ಮನಮುಟ್ಟುವ ರೀತಿಯಲ್ಲಿ ಚಿತ್ರಿಸುತ್ತದೆ. ಗೋವಿನ ಹಾಡಿನಲ್ಲಿ ಗೋವಿನ ಮಾತೃ ಪ್ರೇಮ ಮತ್ತು ತನ್ನ ಕರುವಿನ ಮೇಲಿನ ಕಾಳಜಿಯನ್ನು ಮುಖ್ಯವಾಗಿ ಕಾಣಬಹುದು. ಗೋವು ತನ್ನ ಕರುವಿಗಾಗಿ ಅಪಾರ ಕಾಳಜಿ ವಹಿಸುತ್ತದೆ ತನ್ನ ಮೇಲೆ ಬಂದ ಕಷ್ಟಗಳ ನಡುವೆ ಕೂಡುವುದಿಲ್ಲ. ಪುಣ್ಯಕೋಟಿಯ ಕಥೆ ಮೌಲ್ಯಯುತ ಕಥನಗಳಲ್ಲಿ ಒಂದಾಗಿದೆ. ಇದು ಕೇವಲ ಹಸು ಮತ್ತು ಹುಲಿಯ ಕಥೆಯಾಗಿ ಉಳಿಯದೆ ಸತ್ಯ, ಪ್ರಾಮಾಣಿಕತೆ, ಮಾತಿನ ನಿಷ್ಠೆ, ತ್ಯಾಗ, ಕರುಣೆ ಮತ್ತು ಮಾನವೀಯತೆ ಅಂತಹ ಬದುಕಿನ ಮೌಲ್ಯಗಳನ್ನು ಕಲಿಸುವ ಸಂಸ್ಕಾರದ ಕಥೆಯಾಗಿದೆ.

ಸತ್ಯಕ್ಕೆ ಜೀವಕ್ಕಿಂತಲೂ ಹೆಚ್ಚಿನ ಮೌಲ್ಯವಿದೆ ಎಂಬ ಸಂದೇಶವನ್ನು ಪುಣ್ಯಕೋಟಿ ಸಾರುತ್ತದೆ. ಬದುಕಿನಲ್ಲಿ ಮಾತಿಗೆ ಬೆಲೆ ನೀಡುವುದು ಮುಖ್ಯ. ಪುಣ್ಯಕೋಟಿಯ ನಡೆ ಮಾತು ಕೊಟ್ಟರೆ ಅದನ್ನು ಯಾವುದೇ ಪರಿಸ್ಥಿತಿಯಲ್ಲೂ ಉಳಿಸಿಕೊಳ್ಳಬೇಕೆಂಬ ಸಂಸ್ಕಾರವನ್ನು

***Please cite this article as:*** ಕಲ್ಪನ, ಪಿ. (2026). ಪುಣ್ಯಕೋಟಿ ಕೇವಲ ಕಥೆಯಲ್ಲ ಬದುಕಿನ ಸಂಸ್ಕಾರ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 5(3), 128–131

ಕಲಿಸುತ್ತದೆ. ಪುಣ್ಯಕೋಟಿ ತನ್ನ ಪ್ರಾಣವನ್ನು ಉಳಿಸಿಕೊಳ್ಳಲು ಸುಳ್ಳು ಹೇಳಬಹುದಾಗಿತ್ತು. ಆದರೆ ಹಾಗೆ ಮಾಡದೆ ತನ್ನ ಕರ್ತವ್ಯವನ್ನು ನಿರ್ವಹಿಸುತ್ತದೆ. ಹಾಗಾಗಿ ಕಥೆ ಸ್ವಾರ್ಥಕ್ಕಿಂತ ಧರ್ಮ ಮತ್ತು ಕರ್ತವ್ಯ ಮುಖ್ಯ ಎಂಬ ಮೌಲ್ಯವನ್ನು ತಿಳಿಸುತ್ತದೆ. ಗೋವಿನ ಹಾಡು ಕೇವಲ ಪುಣ್ಯಕೋಟಿ ಮತ್ತು ಹುಲಿಯ ಕಥೆಯಲ್ಲ, ಅದು ಬದುಕನ್ನು ಹೇಗೆ ನಡೆಸಬೇಕು ಎಂಬುದನ್ನು ಕಲಿಸುವ ಸಂಸ್ಕಾರದ ಪಾಠ. ಸತ್ಯವನ್ನು ಪಾಲಿಸುವುದು, ತಾಯಿಯ ಪ್ರೀತಿಯನ್ನು ಗೌರವಿಸುವುದು, ತ್ಯಾಗ ಮಾಡೋದು, ಮತ್ತು ಎಲ್ಲ ಜೀವಿಗಳಲ್ಲಿ ಕರುಣೆ ಹೊಂದುವುದು ಪ್ರಮುಖ ಸಂದೇಶಗಳಾಗಿವೆ. ಪುಣ್ಯಕೋಟಿ ಒಂದು ಪಾತ್ರ ಮಾತ್ರವಲ್ಲ ಅದು ಸತ್ಯ ನಿಷ್ಠೆ ಮತ್ತು ಮಾನವೀಯ ಬದುಕಿನ ಪ್ರತೀಕವಾಗಿದೆ. ಪುಣ್ಯಕೋಟಿಯ ಗುಣಗಳು ಸತ್ಯನಿಷ್ಠೆ, ಮಾತಿನ ನಿಷ್ಠೆ, ತಾಯಿಯ ಮಮತೆ, ತ್ಯಾಗ ಮನೋಭಾವ, ಧೈರ್ಯ, ಕರುಣೆ. ಪುಣ್ಯಕೋಟಿ ಕೇವಲ ಒಂದು ಹಸು ಅಲ್ಲ. ಮಕ್ಕಳಿಗೂ ದೊಡ್ಡವರಿಗು ಜೀವನದಲ್ಲಿ ಸತ್ಯವನ್ನು ಪಾಲಿಸಬೇಕು, ಕೊಟ್ಟ ಮಾತಿಗೆ ಬೆಲೆ ನೀಡಬೇಕು ಮತ್ತು ಜೀವಿಗಳ ಬಗ್ಗೆ ಕರುಣೆ ಹೊಂದಬೇಕು ಎಂಬ ಮೌಲ್ಯ ಮತ್ತು ಸಂಸ್ಕಾರವನ್ನು ಕಲಿಸುತ್ತದೆ.

ಪುಣ್ಯಕೋಟಿ ಎಂದರೆ ಸತ್ಯಕ್ಕೆ, ಬದ್ಧತೆಗೆ, ಮಾತಿನ ನಿಷ್ಠೆಗೆ, ತಾಯಿಯ ಮಮತೆಗೆ ಮತ್ತು ತ್ಯಾಗದ ಪ್ರತಿರೂಪ. ಸತ್ಯ ಮತ್ತು ಪ್ರಾಮಾಣಿಕತೆಗೆ ಕಟ್ಟು ಬಿದ್ದ ಪುಣ್ಯಕೋಟಿ ಎಂಬ ಹಸು ಮತ್ತು ಅರ್ಬುದ ಎಂಬ ಹಸಿದ ಹುಲಿಯ ನಡುವಿನ ಕಥೆ. ಜೀವನದ ದೈವ ಸತ್ಯ ಎಂಬ ಸಂದೇಶವನ್ನು ಪುಣ್ಯಕೋಟಿ ಸಾರುತ್ತದೆ. ಗೋವಿನ ಹಾಡು ಅಥವಾ ಪುಣ್ಯಕೋಟಿ ಕಥೆಯು ಭಾರತೀಯ ಸಂಸ್ಕೃತಿಯಲ್ಲಿ ಅತ್ಯುನ್ನತ ನೈತಿಕ ಮತ್ತು ಮಾನವೀಯ ಮೌಲ್ಯಗಳನ್ನು ಎತ್ತಿ ಹಿಡಿಯುವ ಒಂದು ಮಹಾನ್ ರೂಪಕ. ಪುಣ್ಯಕೋಟಿಯು ಹುಲಿಗೆ ಕೊಟ್ಟ ಮಾತಿನಂತೆ ಮರಳಿ ಬರುತ್ತದೆ. 'ಸತ್ಯವೇ ಭಗವಂತನಿಗೆ ಪ್ರೀತಿ ಮತ್ತು ಸತ್ಯಕ್ಕೆ ಸಾವಿಲ್ಲ' ಎಂಬುದನ್ನು ಇದು ತೋರಿಸುತ್ತದೆ. ಪ್ರಾಣ ಹೋಗುವ ಪರಿಸ್ಥಿತಿ ಬಂದರು ಆಡಿದ ಮಾತನ್ನು ಉಳಿಸಿಕೊಳ್ಳಬೇಕು ಎಂಬ ದೊಡ್ಡ ಸಂಕಲ್ಪವನ್ನು ಪುಣ್ಯಕೋಟಿ ಕಲಿಸುತ್ತದೆ. ತಾಯಿಯ ಜವಾಬ್ದಾರಿ ಮತ್ತು ಕೊಟ್ಟ ವಚನ ಎರಡನ್ನು ಪ್ರಾಮಾಣಿಕವಾಗಿ ನಿಭಾಯಿಸುವ ಮೂಲಕ ಧರ್ಮದ ಹಾದಿಯಲ್ಲಿ ನಡೆಯುವುದನ್ನು ಇದು ಕಲಿಸುತ್ತದೆ. ಪುಣ್ಯಕೋಟಿಯ ಸತ್ಯನಿಷ್ಠೆಯನ್ನು ನೋಡಿ ಹುಲಿಯು ತನ್ನ ತಪ್ಪಿನ ಅರಿವಾಗಿ ಮನಸ್ಸು ಪರಿವರ್ತನೆ ಮಾಡಿ ಕೊಳ್ಳುತ್ತದೆ.

ಪುಣ್ಯಕೋಟಿಯ ಕಥೆಯನ್ನು ಸಂಕ್ಷಿಪ್ತವಾಗಿ ತಿಳಿಯುವುದಾದರೆ ಅರುಣಗಿರಿ ಬೆಟ್ಟದಲ್ಲಿ ಮನೆ ಮಾಡಿಕೊಂಡು ಅದರ ಸುತ್ತಲ ಕಾಡಿನಲ್ಲಿ ದನಗಳನ್ನು ಮೇಯಿಸಿಕೊಂಡಿದ್ದ ಕಾಳಿಂಗ ಎಂಬ ಗೊಲ್ಲನಿದ್ದ. ಅಲ್ಲಿನ ಒಂದು ಗುಹೆಯಲ್ಲಿ ಅರ್ಬುತ ಎಂಬ ಒಂದು ಹಸಿದ ಹುಲಿ ಆಹಾರಕ್ಕಾಗಿ ಕಾಯುತ್ತಿತ್ತು. ಹೀಗೆ ಪ್ರಾರಂಭವಾಗುತ್ತದೆ ಕನ್ನಡದ ಜಾನಪದ ಕಥನ ಗೀತೆ. ಕನ್ನಡ ನಾಡಿನಲ್ಲಿ ಮಗುವಿನಿಂದ ಮುದುಕರವರೆಗೆ ಎಲ್ಲರಿಗೂ ಗೊತ್ತಿರುವ ಕಥೆ. ಸಂಕ್ರಾಂತಿ ಹಬ್ಬಕ್ಕೆ ಸಂಬಂಧಪಟ್ಟ ಒಂದು ಹಳೆಯ ಜಾನಪದ ಗೀತೆ. ಕನ್ನಡ ಬಾಲ ಬೋಧೆಯಲ್ಲಿ ಈ ಕವನ ಸೇರಿದೆ. ಕವನ ತೀರ ಸರಳವಾಗಿದೆ. ಆದರೆ ಅದರ ನೈತಿಕ ಮೌಲ್ಯ ತುಂಬಾ ಗಾಢವಾಗಿದೆ. ಒಂದು ವಾರದಿಂದ ಏನು ಆಹಾರ ಸಿಕ್ಕಿರಲಿಲ್ಲ. ಅದು ದನದ ಗುಂಪಿನ ಮೇಲೆ ಹಾರಿತು. ಕರುವನ್ನೇ ನೆನೆಯುತ್ತಾ ಹಿಂದೆ ಬಿದ್ದು ಅವಸರ ಅವಸರವಾಗಿ ನಡೆಯುತ್ತಿದ್ದ ಪುಣ್ಯಕೋಟಿಯನ್ನು ಹಿಡಿಯಿತು. ಹಸು ಹುಲಿಯನ್ನು ಕುರಿತು ಸ್ವಲ್ಪ ಸಮಯ ಕೊಡು, ಮನೆಗೆ ಹೋಗಿ ಕರುವಿಗೆ ಹಾಲು ಕುಡಿಸಿ ಬರುತ್ತೇನೆ ಎಂದು ಹೇಳುತ್ತದೆ. ಹುಲಿ ಬರಿಯ ಬಾಯಿ ಮಾತನ್ನು ನಂಬಿ ತನ್ನ ಆಹಾರವನ್ನು ಬಿಟ್ಟುಕೊಡಲು ಒಪ್ಪಲಿಲ್ಲ. ಅದು ನ್ಯಾಯವೇ. ಆದರೆ ಹಸು ಹುಲಿಗೆ ಭರವಸೆ ಕೊಡುತ್ತದೆ. ನೋಡು ಹುಲಿರಾಯ ನಾನು ಸತ್ಯ ಹೇಳುವ ಪ್ರಾಣಿ ನಾನು ಹಿಂದಕ್ಕೆ ಬರುವುದಿಲ್ಲ ಎಂಬ ಭಯ ಬೇಡ, ನನ್ನ ಮಾತಿನಲ್ಲಿ ನಿನಗೆ ಸಂದೇಹವೇ ಬೇಡ ಬಾಯಲ್ಲಿರುವುದು ಒಂದೇ ನಾಲಿಗೆ, ಎರಡಲ್ಲ.

ಭಗವಂತನ ಮೇಲೆ ನನ್ನ ಹಿರಿಯರ ಮೇಲೆ ಆಣೆ ಇಟ್ಟು ಹೇಳುತ್ತೇನೆ ನಾನು ಖಂಡಿತ ಹಿಂದಕ್ಕೆ ಬರುತ್ತೇನೆ. ಎಂದು ಹೀಗೆ ಹೇಳುತ್ತದೆ

***ಸತ್ಯವೇ ನಮ್ಮ ತಾಯಿ ತಂದೆ***
***ಸತ್ಯವೇ ನಮ್ಮ ಬಂಧು ಬಳಗ***
***ಸತ್ಯ ವಾಕ್ಯಕೆ ತಪ್ಪಿ ನಡೆದರೆ***
***ಮೆಚ್ಚನಾ ಪರಮಾತ್ಮನು***

ಹುಲಿಗೆ ಹಸುವಿನ ಪ್ರಾಮಾಣಿಕತೆ ಬಗ್ಗೆ ನಂಬಿಕೆ ಹುಟ್ಟಿ, ಅದರ ಮಾತನ್ನು ಪರೀಕ್ಷಿಸೋಣ ಎಂದು ಧೈರ್ಯ ಮಾಡಿ ಹಸುವನ್ನು ಬಿಟ್ಟುಕೊಡುತ್ತದೆ. ತಮ್ಮ ಜೊತೆ ಹಸು ಹಿಂದಕ್ಕೆ ಬಂದದ್ದನ್ನು ನೋಡಿ ಪುಣ್ಯಕೋಟಿ ಅಕ್ಕ–ತಂಗಿಯರಿಗೆ ಸಂತೋಷವಾಗುತ್ತದೆ. ಆದರೆ ಪುಣ್ಯಕೋಟಿಗೆ ಹೆಚ್ಚು ಸಮಯವಿಲ್ಲ. ಅದು ನೇರವಾಗಿ ಕರುವಿನ ಬಳಿಗೆ ಹೋಗಿ ಹೇಳುತ್ತದೆ. ಇದೇ ಕಡೆಯ ಸಲ ಎಷ್ಟು ಬೇಕೋ ಅಷ್ಟು ಹಾಲು ಕುಡಿ ಎಂದು ಕರುವಿಗೆ ಹೇಳುತ್ತಾ ಲೋಕ ವ್ಯವಹಾರ, ಹಟ್ಟಿಯಲ್ಲಿ ಅದು ಇರಬೇಕಾದ ಕ್ರಮ, ಇತರ ಹಸುಗಳೊಡನೆ ನಡೆದುಕೊಳ್ಳಬೇಕಾದ ರೀತಿ, ಇದೆಲ್ಲವನ್ನು ಬೋಧಿಸಿ ಉಳಿದ ಹಸುಗಳನ್ನು ಕುರಿತು ಈ ಕರುವನ್ನು ತಮ್ಮದೇ ಕಂದ ಎಂದು ಭಾವಿಸಿ ನೋಡಿಕೊಳ್ಳುವಂತೆ ಕೇಳಿಕೊಳ್ಳುತ್ತದೆ.

***ಮುಂದೆ ಬಂದರೆ ಹಾಯಬೇಡಿ***
***ಹಿಂದೆ ಬಂದರೆ ಒದೆಯಬೇಡಿ***
***ಕಂದ ನಿಮ್ಮವನೆಂದು ಕಾಣಿರಿ***
***ತಬ್ಬಲಿಯನೀ ಕರುವನು***

ಎಂದು ಕೇಳಿಕೊಳ್ಳುತ್ತದೆ. ನಂತರ ಹುಲಿಯ ಬಳಿ ಸಾಗಿ ನನ್ನನ್ನು ಉಂಡು ಹಸಿವನ್ನು ನೀಗಿಸಿಕೊಳ್ಳುವಂತೆ ಹೇಳುತ್ತದೆ. ತನ್ನ ತಂಗಿಯಂತಿರುವ ಹಸುವನ್ನು ಕೊಲ್ಲುವುದಕ್ಕಿಂತ ನಾನು ಸಾಯುವುದೇ ಲೇಸು ಎಂದುಕೊಂಡು ಹುಲಿ ಹಾರಿ ಸಾಯುತ್ತದೆ. ಹಸು ಮನೆಗೆ ಹಿಂದಿರುಗುತ್ತದೆ. ಅಸಂಭಾವ್ಯ ಎಂದು ತೋರುವ ಈ ಕಥೆಯನ್ನು ಆಸ್ತಿಕರಾದ ನಮ್ಮ ರೈತರು, ಗೊಲ್ಲರು ನಂಬುತ್ತಾರೆ. ಒಂದು ನೀತಿ ಪಾಠದಂತೆ ಇರುವ ಈ ಕಥೆ ಕಲಾತ್ಮಕವಾಗಿದೆ. ವಾಸ್ತವವಾಗಿ ಕನ್ನಡ ಸತ್ವವನ್ನು ಪಡೆದ ಕಲ್ಪನೆ. ಈ ಕವನ ಒಂದು ಕಲಾ ದಿಗ್ವಿಜಯ. ಕಥೆ ಅಷ್ಟು ಹೃದಯಸ್ಪರ್ಶಿಯಾಗಿದೆ. ಘಟನೆಗಳು ಅಷ್ಟು ವಾಸ್ತವವಾಗಿ ನಿರೂಪಿತವಾಗಿವೆ. ಮಾತೃ ಪ್ರೇಮ, ವಾತ್ಸಲ್ಯ ಮುಂತಾದ ಮೂಲ ಭಾವಗಳು ಅಷ್ಟು ಸೊಗಸಾಗಿ ಚಿತ್ರಿಸಲ್ಪಟ್ಟಿವೆ.

ಪುಣ್ಯಕೋಟಿಯ ವರ್ತನೆಯನ್ನು ಅದರ ಸ್ವಭಾವವನ್ನು ಹೇಳುವುದಾದರೆ ಅದೊಂದು ಸರಳ ಪ್ರಾಣಿ. ಗೋವಿನ ಗುಂಪಿನಲ್ಲಿ ಒಂದು. ಅದು ಕಾಮಧೇನು ಅಲ್ಲ, ವಶಿಷ್ಠನ ಸುರಭಿಯೂ ಅಲ್ಲ. ತನ್ನ ಜೊತೆ ಹಸುಗಳೊಡನೆ ಕಾಡಿನಲ್ಲಿ ಓಡಾಡುತ್ತಿರುವುದೇ ಅದಕ್ಕೆ ಇಷ್ಟ. ನೆರೆಹೊರೆಯವರಿಗೆ ಅದನ್ನು ಕಂಡರೆ ಪ್ರೀತಿ. ಅದು ವಾತ್ಸಲ್ಯ ಪೂರ್ಣವಾದ ತಾಯಿ. ಬದುಕು ಪಾಪವೆಂದಾಗಲಿ, ಹೊರೆ ಎಂದಾಗಲಿ ಅದು ಭಾವಿಸಿಲ್ಲ ಹುಲಿಯನ್ನು ಕಂಡರೆ ಉಳಿದ ಹಸುಗಳಂತೆ ಅದಕ್ಕೂ ಭಯವಿದೆ. ಅದು ಯೋಗಿ ಅಲ್ಲ, ಬೋಧಿ ಸತ್ವ ಅಲ್ಲ, ಸಂತನೂ ಅಲ್ಲ. ಅದು ಹುಲಿಯನ್ನು ಸಂಧಿಸಿದ್ದು ಆಕಸ್ಮಿಕ. ಹುಲಿಯನ್ನು ಕಂಡ ಮೇಲೆ ಅದು ತನ್ನ ದುರದೃಷ್ಟಕ್ಕೆ ಶರಣಾಗುತ್ತದೆ. ಮರುಮಾತಿಲ್ಲದೆ ಸಾವಿನ ಅಗತ್ಯವನ್ನು ಒಪ್ಪಿಕೊಳ್ಳುತ್ತದೆ. ಆದರೆ ಕರು ಕಾಯುತ್ತಿದೆ ಅದು ಹೋಗಲೇಬೇಕು. ಮಗುವನ್ನು ಸಮಾಧಾನಗೊಳಿಸಲೇಬೇಕು. ಅದಮ್ಯವಾದ ಬಯಕೆಗೆ ನಿಜವಾದ ತಾಯಿಯಂತೆ ಅದು ಸೋಲುತ್ತದೆ. ಕೆಲವು ನಿಮಿಷ ಆದರೂ ತನ್ನನ್ನು ಬಿಟ್ಟು ಕೊಡುವಂತೆ ಹುಲಿಯನ್ನು ಪ್ರಾರ್ಥಿಸುವ ಧೈರ್ಯ ಮಾಡುತ್ತದೆ. ತನಗೆ ಹಸಿವಿನ ಯಾತನೆ ಗೊತ್ತಿರುವುದರಿಂದ ಮನೆಯಲ್ಲಿರುವ ಕರುವಿನ ಹಸಿದ ಮಾತು ಅದರ ಹೃದಯವನ್ನು ಮೆದುವಾಗಿಸಿರಬೇಕು. ಹಾಗಾಗಿ ಹುಲಿ ಸಮಯದ ಸಾಲ ಕೊಟ್ಟಿದ್ದು, ಹಸುವು ಅದನ್ನು ಕೃತಜ್ಞತೆಯ ಬಡ್ಡಿಯ ಜೊತೆಯಲ್ಲಿ ಹಿಂತಿರುಗಿಸುವುದಕ್ಕೆ ಬಂದಿತ್ತು.

ಜಗತ್ತಿನ ಸಕಲ ಆತ್ಮಾರ್ಪಣೆಗಳ ಚರಿತ್ರೆಯಲ್ಲಿ ಪುಣ್ಯಕೋಟಿ ಹುಲಿಗೆ ತನ್ನನ್ನು ಅರ್ಪಿಸಿಕೊಂಡ ರೀತಿ ಅದ್ವಿತೀಯವಾಗಿದೆ.

***ಖಂಡವಿದೆಕೋ ಮಾಂಸವಿದೆಕೋ***
***ಗುಂಡಿಗೆಯ ಬಿಸಿ ರಕ್ತವಿದೆ ಕೋ***
***ಚಂಡವ್ಯಾಘ್ರನೆ ನೀನಿದೆಲ್ಲವ***
***ನುಂಡು ಸಂತಸದಿಂದಿರು***

ಪುಣ್ಯಕೋಟಿಯ ಬಾಳೆ ಸರಳ, ಆದರೆ ಮನ ಕರಗಿಸುವಂತಹ ಮೃದುಲ. ತನ್ನನ್ನು ಹಿಂಸಿಸುವುದರ ಬಗ್ಗೆ ಸೌಮ್ಯ ಸುಂದರ ನಡತೆ ಇರುವುದು ಬಹಳ ಅಪೂರ್ವ. ದ್ವೇಷ ಅಹಂಕಾರ ಹಿರಿತನದ ಪ್ರಜ್ಞೆ, ಮನಸ್ಸಿನ ಕುಗ್ಗು, ಏನೋ ಸಿದ್ದಿಯ ಭಾವ ಅಥವಾ ವಿಜಯ ಯಾವುದರ ಸೋಂಕು ಇಲ್ಲ ಈ ಪುಣ್ಯಕೋಟಿಯ ಮನಸ್ಸಿನಲ್ಲಿ. ತ್ಯಾಗದಿಂದ ಹುಲಿಯನ್ನು ತೃಪ್ತಿಗೊಳಿಸುವುದು. ಬೇರಾವ ಗುರಿಯಾಗಲಿ ಪುಣ್ಯವಾಗಲಿ ಅದಕ್ಕೆ ಕಾಣುತ್ತಿಲ್ಲ. ಪುಣ್ಯಕೋಟಿಯ ದೈವ ಶ್ರದ್ಧೆ ಮತ್ತು ಸತ್ಯ ಜೀವನ ಅರ್ಬುತದ ಸ್ವಭಾವವನ್ನು ಭೋಗದಿಂದ ವೈರಾಗ್ಯಕ್ಕೆ ಪರಿವರ್ತಿಸಿರಬೇಕು.

***ಎನ್ನ ಒಡಹುಟ್ಟಕ್ಕ ನೀನು,***
***ನಿನ್ನ ಕೊಂದು ನಾನೇನ ಪಡೆವೆನು***
***ಎನ್ನುತಾ ಹುಲಿ ಹಾರಿನೆಗೆದು***
***ತನ್ನ ಪ್ರಾಣವ ಬಿಟ್ಟಿತು.***

ಹೀಗೆ ಹುಲಿ ದೇವತೆಗಳು ಮೆಚ್ಚುವಂತಹ ಪುಣ್ಯಕಾರ್ಯ ಮಾಡುತ್ತದೆ. ಹೀಗೆ ಮುಗಿಯುತ್ತದೆ ಪುಣ್ಯಕೋಟಿ ಮತ್ತು ಅರ್ಬುತದ ಕಥೆ. ಈ ಪ್ರಾಣಿಗಳು ಅಪೂರ್ವವು ಭವ್ಯವೂ ಆದ ಒಂದು ಮನಸ್ಸಿನ ಸೃಷ್ಟಿ. ನಮ್ಮ ಸ್ವಭಾವಕ್ಕೆ ಸತ್ಯವಾಗಿ ನಡೆದುಕೊಂಡು ಸದಾ ಅದಕ್ಕೆ ತಕ್ಕಂತೆ ನಡೆಯಬೇಕು ಎಂಬ ಮೌಲ್ಯವನ್ನು ಸಾರುವ ಕಥನ ಗೀತೆ. ಪುಣ್ಯಕೋಟಿ ಕಥೆಯು ಕೇವಲ ಒಂದು ಹಸು ಮತ್ತು ಹುಲಿಯ ನಡುವಿನ ಜಾನಪದ ಕಥೆಯಲ್ಲ, ಅದು ಭಾರತೀಯ ಸನಾತನ ಚಿಂತನ, ನೀತಿ ಶಾಸ್ತ್ರ ಮತ್ತು ನೈತಿಕ ಬದುಕಿನ ಸಾರವನ್ನು ಕಲಿಸುವ ಜೀವಂತ ಸಂಸ್ಕಾರ. ಕರ್ನಾಟಕದ ಹಳ್ಳಿ ಹಳ್ಳಿಗಳಲ್ಲಿ ಗೋವಿನ ಹಾಡು ಮೂಲಕ ಪ್ರತಿಯೊಬ್ಬರ ಮನದಲ್ಲೂ ಅಚ್ಚೊತ್ತಿರುವ ಈ ಕಥೆ ಮನುಷ್ಯನ ವ್ಯಕ್ತಿತ್ವ ನಿರ್ಮಾಣಕ್ಕೆ ಬೇಕಾದ ಮೂಲಭೂತ ಮೌಲ್ಯಗಳನ್ನು ಕಟ್ಟಿಕೊಡುತ್ತದೆ. ಸತ್ಯ ಮತ್ತು ವಚನ ಪರಿಪಾಲನೆ ಪುಣ್ಯಕೋಟಿ ಕಥೆಯ ಮುಖ್ಯ ತಿರುಳು. ಹುಲಿಗೆ ಹಿಂತಿರುಗಿ ಬರುವುದಾಗಿ ಮಾತು ಕೊಟ್ಟ ಪುಣ್ಯಕೋಟಿ ಜೀವದ ಹಂಗು ತೊರೆದಾದರೂ ಆಡಿದ ಮಾತನ್ನು ಉಳಿಸಿಕೊಳ್ಳುವುದು ಧರ್ಮದ ಲಕ್ಷಣ ಎಂಬುದನ್ನು ನೆನಪಿಸುತ್ತದೆ. ಸಾವಿನ ಮುಖಾ ಮುಖಿಯಲ್ಲೂ ಕರುವಿಗೆ ಹಾಲುಣಿಸಿ ಅದಕ್ಕೆ ಜೀವನ ಪಾಠವನ್ನು ಹೇಳಿ ಬರುವ ಅದರ ನಡೆ ಕರ್ತವ್ಯ ಪ್ರಜ್ಞೆಯ ಪರಮೋಚ್ಚ ಸ್ಥಿತಿ. ತನ್ನನ್ನು ಮೇಯಿಸಿದ ಒಡೆಯ ಹಾಗೂ ಸಹವರ್ತಿ ಹಸುಗಳಿಗೆ ವಂದಿಸಿ ಬರುವ ಪುಣ್ಯಕೋಟಿ ಪ್ರಕೃತಿ ಮತ್ತು ಸಮಾಜದ ಋಣವನ್ನು ಸ್ಮರಿಸುವ ಸಂಸ್ಕಾರವನ್ನು ಕಲಿಸುತ್ತದೆ. ಗೋವಿನ ಹಾಡು ಕೇವಲ ಮಕ್ಕಳಿಗೆ ಹೇಳುವ ನೀತಿ ಕಥೆಯಾಗಿ ಉಳಿಯದೆ ವಚನಭ್ರಷ್ಟತೆ ಹೆಚ್ಚುತ್ತಿರುವ ಇಂದಿನ ಸಮಾಜದಲ್ಲಿ ಪ್ರತಿಯೊಬ್ಬ ವ್ಯಕ್ತಿಯು ಅಳವಡಿಸಿಕೊಳ್ಳಬೇಕಾದ ಜೀವನ ಮೌಲ್ಯವಾಗಿದೆ.

**ಪರಾಮರ್ಶನ ಗ್ರಂಥಗಳು**


- ಮಹೇಶ ತಿಪ್ಪ ಶೆಟ್ಟಿ. *ಪುಣ್ಯಕೋಟಿ: ಒಂದು ಸಾಂಸ್ಕೃತಿಕ ಅಧ್ಯಯನ*, ಕರ್ನಾಟಕ ವಿಶ್ವವಿದ್ಯಾಲಯ
- ಮುಗಳಿ, ರಂ.ಶ್ರೀ. (2014). *ಗೋವಿನ ಹಾಡು.* (ನಾಲ್ಕನೇ ಮುದ್ರಣ). ಕನ್ನಡ ಸಾಹಿತ್ಯ ಪರಿಷತ್ತು
- ಪು.ತಿ.ನ. (2022). *ಹಸು ಪುಣ್ಯಕೋಟಿ* ಮತ್ತು *ಹುಲಿ ಅರ್ಬುತ.* **ಗ್ರಂಥ**: ರಾಘವೇಂದ್ರ ರಾವ್, ಹೆಚ್.ಎಸ್. (ಸಂ.) ಶತಮಾನದ ಸಾಹಿತ್ಯ ವಿಮರ್ಶೆ. ಕರ್ನಾಟಕ ಸಾಹಿತ್ಯ ಅಕಾಡೆಮಿ.